

بسم اللهِ الرّحمٰن الرّحيم

# ಮುಹಮ್ಮದ್ ಪೈಗಂಬರ(ಸ)ರೊಂದಿಗೆ ವಿಧೇಯತೆಯ ಮೂಲಕ ಅಲ್ಲಾಹನನ್ನು ಹುಡುಕಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **15-08-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ತಿಲಾವತ್ ಮಾಡಿದರು:

**ಯಾ ಅಯ್ಯುಹಲ್ಲಝೀನ ಆಮನುಸ್‌ತಜೀಬೂ ಲಿಲ್ಲಾಹಿ ವಲಿರ್‍ರಸೂಲಿ ಇಝಾ ದಆಕುಮ್ ಲಿಮಾ ಯುಹ್‌ಯೀಕುಮ್.**

ಅರ್ಥ: **ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ– ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ**. (ಪವಿತ್ರ ಖುರ್‌ಆನ್ 8: 25).

ಅಲ್ಲಾಹನು ತನ್ನ ಸಂದೇಶವಾಹಕರನ್ನು ಜನರನ್ನು ಜೀವಂತಗೊಳಿಸಲು ಕಳುಹಿಸುತ್ತಾನೆ. ಆದರೆ ಜನರನ್ನು ಜೀವಂತಗೊಳಿಸುವುದು ಆಧ್ಯಾತ್ಮಿಕವಾದ ಜೀವನ ಎಂದು ಪವಿತ್ರ ಖುರ್‌ಆನಿನ ವಿವರಣೆಯಿಂದ ತಿಳಿದು ಬರುತ್ತದೆ. ವಾಸ್ತವಿಕವಾಗಿ ಮೃತರಾದವರನ್ನು ಅವರು ಬದುಕಿಸುವುದಿಲ್ಲ. ಸತ್ಯವಿಶ್ವಾಸಿ ಯಾವಾಗಲೂ ಪ್ರವಾದಿಯ ಕರೆಗೆ ಓಗೊಟ್ಟು ತನ್ನನ್ನು ಸುಧಾರಣೆ ಮಾಡುವ ಬಗ್ಗೆ ಪ್ರಯತ್ನಿಸುತ್ತಿರಬೇಕು ಎಂಬ ಸತ್ಯವನ್ನು ಸಹ ಈ ವಚನದಲ್ಲಿ ಪ್ರಕಟಿಸಲಾಗಿದೆ. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ನಮಗೆ ಆಧ್ಯಾತ್ಮಿಕ ಜೀವನಾಧಾರವನ್ನು ಒದಗಿಸಿ ಕೊಟ್ಟನು. ಪವಿತ್ರ ಖುರ್‌ಆನಿನ ರೂಪದಲ್ಲಿ ಒಂದು ಪರಿಪೂರ್ಣ ಶರೀಅತ್ ಗ್ರಂಥವನ್ನು ನಮಗೆ ಅವತೀರ್ಣಗೊಳಿಸಿಕೊಟ್ಟನು. ಈ ಪವಿತ್ರ ಗ್ರಂಥದ ಆಜ್ಞೆಗಳನ್ನು ಅನುಸರಿಸುವ ಪರಿಪೂರ್ಣ ಮಾದರಿಯನ್ನಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಮಾಡಿದನು. ಯಾರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಹೆಚ್ಚು ಸಮೀಪವಾಗಿದ್ದಾರೋ ಅಂತಹ ಜನರಿಗೆ ಅವರ ನಡೆವಳಿಕೆಗಳ ಸೌಂದರ್ಯ ಹೆಚ್ಚು ಸ್ಪಷ್ಟವಾಗುತ್ತಿತ್ತು. ಅವರ ನಡೆವಳಿಕೆಗಳ ಸೌಂದರ್ಯದ ಬಗ್ಗೆ ಇತರರಿಗಿಂತ ಅತ್ಯಂತ ಹೆಚ್ಚು ಸಾಕ್ಷ್ಯ ವಹಿಸಿದವರು ಅವರ ಪತ್ನಿಯರು ಆಗಿದ್ದರು. ಇದೇ ಕಾರಣದಿಂದ, ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರೊಂದಿಗೆ "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸ್ವಭಾವ ಗುಣಗಳು ಹೇಗೆ ಇದ್ದುವು?" ಎಂದು ಕೇಳಿದಾಗ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು: **ಕಾನ ಖುಲ್‌ಖುಹುಲ್ ಖುರ್‌ಆನ್** 'ಅವರ ಸ್ವಭಾವ ಗುಣಗಳು ಪವಿತ್ರ ಖುರ್‌ಆನ್ ಆಗಿತ್ತು.' ಅಂದರೆ ಪವಿತ್ರ ಖುರ್‌ಆನಿನಲ್ಲಿ ಏನೆಲ್ಲಾ ನಿರ್ದೇಶಗಳಿದ್ದವೋ ಅವುಗಳ ಕೃತಿರೂಪ ಅವರಾಗಿದ್ದರು ಎಂದರ್ಥ.

ಪ್ರವಾದಿಗಳು ಲೋಕಕ್ಕೆ ಮಾದರಿಯಾಗಿರುತ್ತಾರೆ. ಆದುದರಿಂದ ಅವರ ಜೀವನ ಅಥವಾ ಅವರ ನಡೆವಳಿಕೆಗಳಿಂದ ಯಾರಾದರೂ ಮೋಸಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹ್ ಮತ್ತು ಸಂದೇಶವಾಹಕರನ್ನು ಜೊತೆ ಸೇರಿಸಿ ಪ್ರಸ್ತಾಪಿಸಲಾಗಿದೆ. ಅಲ್ಲಾಹನು ಈ ವಚನದಲ್ಲಿ ಹೀಗೆ ಸೂಚಿಸುತ್ತಾನೆ: **ಅಲ್ಲಾಹನು ಹೇಳುವುದನ್ನೇ ಅವನ ಸಂದೇಶವಾಹಕರು ಹೇಳುತ್ತಾರೆ ಮತ್ತು ಮಾಡುತ್ತಾರೆ. ಆದುದರಿಂದ ಆಧ್ಯಾತ್ಮಿಕ ಜೀವಿತವನ್ನು ನೀವು ಬಯಸುವಿರಾದರೆ ಕಣ್ಣು ಮುಚ್ಚಿಕೊಂಡು ಸಂದೇಶವಾಹಕನನ್ನು ಅನುಸರಿಸಿ ನಡೆಯಿರಿ. ಅವರಿಗೆ ವಿಧೇಯರಾಗಿ ಅವರ ಆಜ್ಞೆಗಳನ್ನು ಪಾಲಿಸಿರಿ**. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಹೀಗೆ ಸಹ ಹೇಳಲಾಗಿದೆ: **ನೀವು ಅಲ್ಲಾಹನನ್ನು ಪ್ರೀತಿಸಲು ಬಯಸುವುದಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸುವುದು ಆವಶ್ಯಕವಾಗಿದೆ. ಅಲ್ಲಾಹನ ಪ್ರೀತಿ ಗಳಿಸುವ ಮೂಲಕವೇ ಆಧ್ಯಾತ್ಮಿಕ ಜೀವಿತ ಲಭಿಸುತ್ತದೆ. ಆದುದರಿಂದ ವಾಸ್ತವಿಕ ಆಧ್ಯಾತ್ಮಿಕ ಜೀವಿತವನ್ನು ಗಳಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕರೆಗೆ ಓಗೊಡುವುದು ಮತ್ತು ಅವರನ್ನು ಅನುಸರಿಸುವುದು ಆವಶ್ಯಕವಾಗಿದೆ**. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ಪ್ರಕಟಿಸಿದ **ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ್** "ನನ್ನನ್ನು ಅನುಸರಿಸಿದರೆ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು" ಎಂಬ ಆಜ್ಞೆಯನ್ನು ತಾನು ಮುಸ್ಲಿಮನೆಂದು ಹೇಳಿಕೊಳ್ಳುವವನು ವಾಸ್ತವಿಕವಾಗಿ ನಂಬುವುದಿಲ್ಲವಾದರೆ ಅಂತಹ ಮನುಷ್ಯ ಅವರ ನಿಜವಾದ ಅನುಯಾಯಿ ಎಂದಾಗಲಿ ನಿಜವಾದ ಸತ್ಯವಿಶ್ವಾಸಿ ಎಂದಾಗಲಿ ಗಣಿಸಲ್ಪಡಲಾರನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸಲು ಅವರ ನಡೆವಳಿಕೆಯ ಲಿಖಿತ ರೂಪ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದ ಹಾಗೆ ಪವಿತ್ರ ಖುರ್‌ಆನಿನ ರೂಪದಲ್ಲಿ ನಮ್ಮ ಮುಂದಿದೆ. ಆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **"ಯಾವುದೇ ಸಮುದಾಯದ ಹಗೆತನ ಅವರ ವಿರುದ್ಧ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಉತ್ತೇಜಿಸದಿರಲಿ."** ಅದೇ ಪವಿತ್ರ ಖುರ್‌ಆನ್ ನಮ್ಮೊಡನೆ ಹೇಳುತ್ತದೆ: **ನಿಷ್ಕಾರಣವಾಗಿ ಯಾರ ರಕ್ತಪಾತವನ್ನು ಮಾಡಬೇಡಿರಿ** ಎಂದು. ಅದೇ ಪವಿತ್ರ ಖುರ್‌ಆನ್ ಹೇಳುತ್ತದೆ– **ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ನೀಡಿರಿ** ಎಂದು. ಅದೇ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು **"ರಹ್ಮತುನ್‌ಲಿಲ್ ಆಲಮೀನ್"** (ಸಕಲ ಲೋಕಗಳಿಗೂ ಅನುಗ್ರಹವಾಗಿರುವವರು) ಎಂದು ವರ್ಣಿಸಿದೆ. ಧರ್ಮದ ಮತ್ತು ಜನಾಂಗದ ಪರಿಗಣನೆಯಿಲ್ಲದೆ ಅವರು ಪ್ರತಿಯೊಬ್ಬರಿಗೂ ಅನುಗ್ರಹದಾಯಕರಾಗಿದ್ದಾರೆ. ರಹ್ಮಾನ್ ಎಂಬ ಗುಣ ಯಾವುದೇ ತಾರತಮ್ಯತೆಯನ್ನು ಅನುಮತಿಸುವುದಿಲ್ಲ. ಪವಿತ್ರ ಖುರ್‌ಆನ್ ಓದುತ್ತಾ ಹೋಗುವಾಗ ಅದರಲ್ಲಿ ಎಲ್ಲಾ ವಿಧಗಳ ಮಾರ್ಗದರ್ಶನಗಳು ಲಭಿಸುತ್ತಾ ಇರುತ್ತವೆ. ಇಂದಿನ ಕಾಲದ ಮುಸ್ಲಿಮರ ತಪ್ಪು ಕೆಲಸಗಳನ್ನು ಕಂಡು ಮುಸ್ಲಿಮೇತರರು

ಮತ್ತು ಇತರ ಆಕ್ಷೇಪಗಾರರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ಮತ್ತು ಇಸ್ಲಾಮ್ ಧರ್ಮದ ವಿರುದ್ಧ ಮಾಡುವ ಪ್ರತಿಯೊಂದು ಆಕ್ಷೇಪವನ್ನು ಅದು ಖಂಡಿಸುತ್ತದೆ.

ನನ್ನೊಂದಿಗೆ ಜನರು ಪ್ರಶ್ನಿಸುತ್ತಾರೆ– ಅಂತೆಯೇ ಇತರ ಅಹ್ಮದಿಯರೊಂದಿಗೆ ಸಹ ಜನರು ವಿಚಾರಿಸುತ್ತಾರೆ. ನಾನು ಅಂತಹ ಜನರಿಗೆ ಹೀಗೆ ಹೇಳುತ್ತೇನೆ. ನಿಮ್ಮ ಆಕ್ಷೇಪಗಳಿಗೆ ಉತ್ತರ ಅಲ್ಲಾಹನು ಮತ್ತು ಅವನ ಸಂದೇಶವಾಹಕರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹದಿನಾಲ್ಕುನೂರು ವರ್ಷಗಳ ಹಿಂದೆಯೇ ನೀಡಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಸೂರತುಲ್ ಜುಮುಅದಲ್ಲಿ ಈ ವಚನವಿದೆ: **‘ಹೂವಲ್ಲಝೀ ಬಅಸ ಫಿಲ್ ಉಮ್ಮಿಯ್ಯೀನ ರಸೂಲನ್ ಮಿನ್‌ಹುಮ್ ಯತ್‌ಲೂ ಅಲೈಹಿಮ್ ಆಯಾತಿಹೀ ವ ಯುಝಕ್ಕೀಹಿಮ್ ವ ಯುಅಲ್ಲಿಮುಹುಮುಲ್ ಕಿತಾಬ ವಲ್‌ಹಿಕ್‌ಮತ ವ ಇನ್‌ಕಾನೂ ಮಿನ್ ಖಬ್‌ಲು ಲಫೀ ಝುಲಾಲಿನ್ ಮುಬೀನ್. ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್. ವ ಹೂವಲ್ ಅಝೀಝುಲ್ ಹಕೀಮ್.’** ಅರ್ಥ: ಅನಕ್ಷರಸ್ಥ ಜನರಲ್ಲಿ, ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯುಕ್ತಿಗೊಳಿಸಿದವನು ಅವನೇ. ಆ ಸಂದೇಶವಾಹಕ ಅವನ (ಅಲ್ಲಾಹನ) ವಚನಗಳನ್ನು ಅವರಿಗೆ ವಾಚಿಸುತ್ತಾರೆ. ಅವರನ್ನು ಶುದ್ಧೀಕರಿಸುತ್ತಾರೆ. ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಅವರು (ಆ ಜನರು) ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ (ಅವನು ಸಂದೇಶವಾಹಕನನ್ನು ನಿಯುಕ್ತಿಗೊಳಿಸುವನು). ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 62: 3,4).

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿ ಜನರು ಪ್ರಕಟಿಸುತ್ತಾ ಇದ್ದ ಅಜ್ಞಾನವನ್ನೂ ಪಥಭ್ರಷ್ಟತೆಯನ್ನೂ ಅದೇ ರೀತಿ ಇಂದಿನ ಕಾಲದ ಮುಸ್ಲಿಮರು ಸಹ ಪ್ರಕಟಿಸುತ್ತಾ ಇದ್ದಾರೆ. ಅಂದಿನ ಕಾಲದ ಅಜ್ಞಾನಿಗಳಾದ ಜನರನ್ನು ಸುಧಾರಣೆ ಮಾಡಲು ಮತ್ತು ಅವರಿಗೆ ಜೀವದಾಯಕ ಸಂದೇಶವನ್ನು ನೀಡಲು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಕಳುಹಿಸಿದ್ದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಂದ ಆ ಜೀವದಾಯಕ ಸಂದೇಶವನ್ನು ಈ ಕಾಲದಲ್ಲಿ ಲೋಕದಾದ್ಯಂತ ಹರಡಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು. ಅವರನ್ನು ಬೈಅತ್ ಮಾಡಿದ ಅಹ್ಮದಿಯಾ ಜಮಾಅತ್ ಈ ಸಂದೇಶವನ್ನು ಲೋಕದಾದ್ಯಂತ ಹರಡುತ್ತಾ ಇದೆ. ಇದು ಈ ಜಮಾಅತಿನ ಹೊಣೆಗಾರಿಕೆಯೂ ಆಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು– ನಾನು ಜೀವಂತಗೊಳಿಸಲು ಆಗಮಿಸಿರುವೆ– ಎಂದು. ಅವರನ್ನು ನಂಬಿದವರು ಆಧ್ಯಾತ್ಮಿಕವಾಗಿ ಜೀವಂತವಾದರು.

ಏನು ಈ ಸಂದೇಶವಾಹಕ ಈಗ ಜೀವದಾಯಕನಾಗಿಲ್ಲವೇ? ಈ ಸ್ಥಿತಿ ಕೊನೆಗೊಂಡಿದೆಯೇ? ಎಂಬ ಆಕ್ಷೇಪಕ್ಕೆ ಉತ್ತರವೇನೆಂದರೆ, ಇಂತಹ ಪರಿಸ್ಥಿತಿ ತಲೆದೋರುವುದು ಎಂದು ಅಲ್ಲಾಹನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹದಿನಾಲ್ಕು ನೂರು ವರ್ಷಗಳ ಮೊದಲೇ ಹೇಳಿದ್ದರು. ಅಲ್ಲಾಹನ ಸಂದೇಶ ಜೀವದಾಯಕವಾಗಿ ಯಾವಾಗಲೂ ಬಾಕಿಯಾಗಿ ಉಳಿಯುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಯಾವಾಗಲೂ ಪುನರುತ್ಥಾನ ದಿನದ ತನಕ ಜೀವದಾಯಕರಾಗಿಯೇ ಇರುವರು. ಆದರೆ ಜನರು ಆ ಸಂದೇಶದಿಂದ ದೂರ ಸರಿದು ಅದನ್ನು ಅನುಸರಿಸಿ ನಡೆಯುವುದರಿಂದ ವಿಮುಖರಾಗುವರು. ಅಂತಹ ಸಂದರ್ಭದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವ ಮಸೀಹ್ ಮೌಊದ್‌ರನ್ನು ಕಳುಹಿಸುವನು. ಇವೆಲ್ಲಾ ಭವಿಷ್ಯವಾಣಿಗಳಲ್ಲಿ ಮೊದಲೇ ಸೂಚಿಸಲ್ಪಟ್ಟ ಸಂಗತಿಗಳಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳುತ್ತಾರೆ: “**ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** ಎಂಬ ಪವಿತ್ರ ಖುರ್‌ಆನ್ ವಚನದ ಸಾರಾಂಶವೇನೆಂದರೆ ಪರಿಪೂರ್ಣವಾದ ಅಜ್ಞಾನಕಾಲದ ನಂತರ ಮಾರ್ಗದರ್ಶನ ಮತ್ತು ಸುಜ್ಞಾನ ಗಳಿಸುವ ಎರಡು ಗುಂಪುಗಳು ಮಾತ್ರ ಇದೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪವಾಡಕೃತ್ಯಗಳನ್ನೂ ಅನುಗ್ರಹಗಳನ್ನೂ ಕಾಣುವವರಾಗುವರು. ಒಂದನೆಯ ಗುಂಪು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರದಾಗಿದೆ. ಆ ಜನರು ಮುಸ್ಲಿಮರಾಗುವ ಮೊದಲು ಗಾಂಢಾಂಧಕಾರದಲ್ಲಿ ಮುಳುಗಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರಾಗಿ ಅದ್ಭುತಗಳನ್ನು ಕಣ್ಣಾರೆ ಕಂಡರು. ಭವಿಷ್ಯವಾಣಿಗಳು ಈಡೇರುವುದನ್ನು ಕಂಡರು. ಅವರಲ್ಲಿ ದೃಢನಂಬಿಕೆ ಬೇರೂರಿ ಅವರೆಲ್ಲರೂ ಒಂದೇ ಆತ್ಮ ಹೊಂದಿದವರಾದರು. ಪವಿತ್ರ ಖುರ್‌ಆನ್ ಸೂಚಿಸುವ ಎರಡನೆಯ ಗುಂಪು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರ ಹಾಗೆ ಇರುವ ಮಸೀಹ್ ಮೌಊದರ ಶಿಷ್ಯರ ಗುಂಪಾಗಿದೆ. ಈ ಗುಂಪು ಸಹಾಬರ ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅದ್ಭುತ ಕೃತ್ಯಗಳನ್ನು ಕಾಣುವವರಾಗಿದ್ದಾರೆ. ಅವರು ಅಂಧಕಾರದ ನಂತರ ಸನ್ಮಾರ್ಗ ಗಳಿಸುವವರಾಗಿದ್ದಾರೆ. **ವ ಆಖರೀನ ಮಿನ್‌ಹುಮ್** ಎಂದು ಹೇಳಿ ಈ ಜನರನ್ನು ಸಹಾಬರಿಗೆ ಸಮಾನರೆಂದು ಅನುಗ್ರಹ ಪೂರ್ಣವಾಗಿ ಪ್ರಸ್ತಾಪಿಸಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸಹಾಬರು ಪವಾಡಗಳನ್ನು ಕಂಡ ಹಾಗೆ, ಭವಿಷ್ಯವಾಣಿಗಳ ಈಡೇರಿಕೆಗೆ ಸಾಕ್ಷಿಗಳಾದ ಹಾಗೆ ಈ ಗುಂಪಿನ ಜನರು ಸಹ ಕಾಣುವರು. ಆದರೆ ಈ ಎರಡು ಗುಂಪುಗಳ ಮಧ್ಯದ ಕಾಲಘಟ್ಟದ ಜನರು ಈ ಭಾಗ್ಯವನ್ನು ಪರಿಪೂರ್ಣವಾಗಿ ಹೊಂದಿರಲಾರರು. ಈಗ ನೋಡಿರಿ, ಭವಿಷ್ಯವಾಣಿಗಳಲ್ಲಿ ಹೇಳಲಾದಂತೆಯೇ ಸಂಭವಿಸಿರುತ್ತದೆ. ಹದಿಮೂರು ನೂರು ವರ್ಷಗಳ ನಂತರ ಇಂದಿನ ಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅದ್ಭುತ ಕೃತ್ಯಗಳ ಬಾಗಿಲು ಪುನಃ ತೆರೆಯಲ್ಪಟ್ಟಿರುತ್ತದೆ. ಅದನ್ನು ಜನರು ಕಣ್ಣಾರೆ ಕಂಡರು ಮತ್ತು ಅದಕ್ಕೆ ಸಾಕ್ಷಿಗಳಾದರು.”

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ಪ್ಲೇಗ್ ರೋಗ ವ್ಯಾಪಿಸಿದುದು, ಹಜ್ ಮಾಡುವುದರಿಂದ ತಡೆಯಲ್ಪಟ್ಟಿರುವುದು, ಜನರು ಸ್ವತಃ ತಮ್ಮ ಕಣ್ಣುಗಳಿಂದ ಕಂಡರು. ರೈಲು ಬಂಡಿ ಚಲಾಯಿಸಲ್ಪಟ್ಟದ್ದು, ಒಂಟೆಗಳು ನಿರುಪಯೋಗಿ ಆದುದು ಇವೆಲ್ಲವೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪವಾಡ ಕೃತ್ಯಗಳೇ ಆಗಿವೆ. ಇವುಗಳು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರು ಕಂಡ ಹಾಗಿರುವ ಅದ್ಭುತ ಕೃತ್ಯಗಳೇ ಆಗಿವೆ. ಇದೇ ಕಾರಣದಿಂದ ಅಲ್ಲಾಹನು ಮಸೀಹ್ ಮೌಊದರ ಶಿಷ್ಯರ ಗುಂಪನ್ನು **'ಮಿನ್‌ಹುಮ್'** ಸಹಾಬರ ಹಾಗೆ ಇರುವವರೆಂದು ಸೂಚಿಸಿರುವನು. ಅವರು ಕಾಣುವ ಅದ್ಭುತ ಕೃತ್ಯಗಳು ಸಹಾಬರು ಕಂಡ ಹಾಗೆಯೇ ಇರುವುವು. ನೀವು ಯೋಚಿಸಿ ನೋಡಿರಿ. ಕಳೆದ ಹದಿಮೂರು ನೂರು ವರ್ಷಗಳಲ್ಲಿ ಇಂತಹ ಕಾಲಘಟ್ಟವನ್ನು ಬೇರೆ ಯಾರು ಕಂಡಿರುವರು. ಈ ಕಾಲಘಟ್ಟದಲ್ಲಿ ಸ್ಥಾಪಿಸಲ್ಪಟ್ಟ ಈ ಜಮಾಅತ್ ಅನೇಕ ಕಾರಣಗಳಿಂದ ಸಹಾಬರ ಜಮಾಅತ್‌ನೊಂದಿಗೆ ಸಾದೃಶ್ಯ ಹೊಂದಿದೆ. ಸಹಾಬರು ಅದ್ಭುತ ಕೃತ್ಯಗಳನ್ನೂ ದೃಷ್ಟಾಂತಗಳನ್ನೂ ಕಂಡ ಹಾಗೆ ಈ ಜಮಾಅತಿನ ಜನರು ಸಹ ಕಾಣುತ್ತಿದ್ದಾರೆ. ಅವರು ಅಲ್ಲಾಹನ ದೃಷ್ಟಾಂತಗಳ ಮತ್ತು ಸಹಾಯಗಳ ಮೂಲಕ ಪ್ರಕಾಶವನ್ನೂ ದೃಢವಿಶ್ವಾಸವನ್ನೂ ಸಹಾಬರು ಗಳಿಸಿದ ಹಾಗೆ ಗಳಿಸುತ್ತಿದ್ದಾರೆ. ಅಲ್ಲಾಹನಿಗೋಸ್ಕರವಾಗಿ ಅವರು ಜನರಿಂದ ಅಪಹಾಸ್ಯ ನಿಂದನೆ ಮತ್ತು ಬೈಗಳನ್ನು ಸಹಾಬರು ಸಹಿಸಿದ ಹಾಗೆ ಸಹಿಸುತ್ತಿದ್ದಾರೆ. ಅವರು ಅಲ್ಲಾಹನು ತೋರಿಸಿದ ದೃಷ್ಟಾಂತಗಳ ಮೂಲಕ ಮತ್ತು ದೇವನ ಸಹಾಯಗಳ ಮೂಲಕ ಮತ್ತು ವಿವೇಕ ಭರಿತ ಉಪದೇಶಗಳನ್ನು ಗಳಿಸುವ ಮೂಲಕ ಸಹಾಬರ ಹಾಗೆ ಪರಿಶುದ್ಧವಾಗಿ ಜೀವಿಸುತ್ತಿದ್ದಾರೆ. ಅವರ ಪೈಕಿ ಅನೇಕ ಜನರು ಸಹಾಬರ ಹಾಗೆ ನಮಾಝ್‌ಗಳಲ್ಲಿ ಅಳುತ್ತಾ ಪ್ರಾರ್ಥಿಸುತ್ತಾರೆ ಮತ್ತು ಸುಜೂದ್ ಮಾಡುವ ಸ್ಥಳಗಳನ್ನು ಕಣ್ಣೀರಿನಿಂದ ತೇವಭರಿತವನ್ನಾಗಿ ಮಾಡುತ್ತಾರೆ."

"ನಾನು ಲೋಕಕ್ಕೆ ಜೀವವನ್ನು ನೀಡಲು ಆಗಮಿಸಿರುವೆನು" ಎಂಬ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದ ಬಹಳ ಭವ್ಯವಾಗಿ ಈಡೇರಿತು ಮತ್ತು ಈಡೇರುತ್ತಾ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸಿದ ಅವರ ಮೂಲಕ ಅಲ್ಲಾಹನು ಲೋಕಕ್ಕೆ ಜೀವವನ್ನು ದಯಪಾಲಿಸುತ್ತಿದ್ದಾನೆ. ಇಂದು ಅಲ್ಲಾಹನ ವಚನವಾದ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡಿಕೊಳ್ಳುವುದು ಅವರ ಮೂಲಕ ಮಾತ್ರ ಸಾಧ್ಯ. ಪವಿತ್ರ ಖುರ್‌ಆನಿನ ಸೂಕ್ಷ್ಮ ಜ್ಞಾನಗಳನ್ನು ವಿವರಿಸುವುದು ಅವರ ಮಾತ್ರ ಕೆಲಸವಾಗಿದೆ. ಜನರಿಗೆ ಆಧ್ಯಾತ್ಮಿಕ ಜೀವಿತ ಅವರ ಮೂಲಕ ಮಾತ್ರ ದೊರಕುತ್ತಿದೆ. ಮತ್ತು ಅವರ ಮೂಲಕ ಮಾತ್ರ ದೊರಕಲು ಸಾಧ್ಯ. ಹದಿನಾಲ್ಕು ನೂರು ವರ್ಷಗಳ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅನುಸರಣೆ ಮತ್ತು ಪ್ರೀತಿಯಲ್ಲಿ ತಲ್ಲೀನರಾಗಿ ಪರಿಪೂರ್ಣವಾದ ಕರ್ಮ ರೂಪದ ಮಾದರಿಯನ್ನು ಅವರು ತೋರಿಸಿದರು. ಕರ್ಮ ರೂಪದಲ್ಲಿ ಮತ್ತು ನೈತಿಕವಾಗಿ ಜೀವದಾಯಕವಾದ ಈ ಅನುಗ್ರಹ ಈಗ ಸಹ ಜಾರಿಯಲ್ಲಿದೆ.

ಇಸ್ಲಾಮ್ ಧರ್ಮದ ತತ್ವಗಳಲ್ಲಾಗಲೀ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾದರಿಯಲ್ಲಾಗಲೀ ಯಾವುದೇ ದೋಷ ಅಥವಾ ಕೊರತೆ ಇರುವುದಿಲ್ಲ. ಇಸ್ಲಾಮ್ ಧರ್ಮ ತತ್ವಗಳು ಪರಿಪೂರ್ಣವಾಗಿಯೇ ಇದೆ. ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪವಿತ್ರ ಜೀವಿತ ಮಾದರಿ ಅತ್ಯುತ್ಕೃಷ್ಟವಾಗಿಯೇ ಇವೆ. ಏನಾದರೂ ಕೊರತೆ ಅಥವಾ ದೋಷ ಉಂಟಾಗಿದ್ದರೆ ಅದು ಜನರಿಗೆ ತಪ್ಪು ಮಾರ್ಗದರ್ಶನ ನೀಡುತ್ತಿರುವ ಇಂದಿನ ಮತ ಪಂಡಿತರಿಂದ ಹಾಗೂ ಅವರನ್ನು ಹಿಂಬಾಲಿಸಿಕೊಂಡು ತಪ್ಪು ದಾರಿಯಲ್ಲಿ ನಡೆಯುತ್ತಿರುವ ಜನರಿಂದ ಸಂಭವಿಸಿದೆ.

ಪ್ರವಾದಿಗಳು ಜೀವದಾಯಕರಾಗಿರುತ್ತಾರೆ ಎಂಬುದು ಸರಿಯಲ್ಲವಾದರೆ ದೇವನ ಬಗ್ಗೆ ಸಹ ವಿಶ್ವಾಸ ಹೊರಟು ಹೋಗುತ್ತದೆ. ಕೇವಲ ವಾದಗಳನ್ನು ಮಂಡಿಸುವ ಆದರೆ ಜೀವದಾಯಕವಾದ ಯಾವುದೇ ವಿಷಯವಿಲ್ಲದ ಧರ್ಮ ಮೃತ ಧರ್ಮವಾಗಿದೆ. ಇದೇ ಕಾರಣದಿಂದ ಜನರು ಅಂತಹ ಧರ್ಮವನ್ನು ತ್ಯಜಿಸುತ್ತಾರೆ. ಅಂತಹ ಧರ್ಮಗಳೊಂದಿಗೆ ಜನರು ಆಚಾರದ ಸಂಬಂಧ ಇರಿಸುತ್ತಾರೆ. ಆದರೆ ಅವರಿಗೆ ಆ ಧರ್ಮದೊಂದಿಗೆ ವಿಶ್ವಾಸದ ಸಂಬಂಧ ಇರುವುದಿಲ್ಲ. ಮುಸ್ಲಿಮರಿಗೆ ಅಲ್ಲಾಹನು ಮಾಡಿರುವ ಅತಿದೊಡ್ಡ ಅನುಗ್ರಹವೇನೆಂದರೆ ಈ ಕಾಲಘಟ್ಟದಲ್ಲಿಯೂ ಅವನು ತನ್ನ ಸಂದೇಶವಾಹಕನನ್ನು ಕಳುಹಿಸಿ ತನ್ನ ಉಪದೇಶಗಳನ್ನು ತಾಜಾ ರೂಪದಲ್ಲಿ ನಮ್ಮ ಮುಂದಿರಿಸಿ ನಾವು ಆಧ್ಯಾತ್ಮಿಕ ಜೀವಿತವನ್ನು ಅನುಭವಿಸುವಂತೆ ಮಾಡಿರುವನು.

ಇಲ್ಲಿ ಒಂದು ವಿಷಯವನ್ನು ನೆನಪಿಡಬೇಕಾದುದು ಅತೀ ಆವಶ್ಯಕವಾಗಿದೆ. ಅದೇನೆಂದರೆ ಅಲ್ಲಾಹನು ನೇಮಿಸಿದ ಮಹಾನುಭಾವರನ್ನು ಅಂಗೀಕರಿಸಿ ಜೀವನವನ್ನು ಗಳಿಸುವವರು ಮತ್ತು ಇತರರಿಗೆ ಜೀವನವನ್ನು ದಯಪಾಲಿಸುವವರು ಬಲಿದಾನಗಳನ್ನೂ ಅರ್ಪಿಸಬೇಕಾಗುತ್ತವೆ. ಅಲ್ಲಾಹನು ನೇಮಿಸಿದವರ ಜೊತೆ ಸೇರುವವರು ಎಲ್ಲಾ ರೀತಿಯ ಬಲಿದಾನಗಳನ್ನು ಮಾಡಲು ಸಿದ್ಧರಾಗಿರುತ್ತಾರೆ. ಏಕೆಂದರೆ ತಾವು ಮಾಡುವ ತ್ಯಾಗ ಬಲಿದಾನಗಳು ವ್ಯರ್ಥವಾಗಲಾರವು ಎಂದು ಅವರಿಗೆ ತಿಳಿದಿರುತ್ತದೆ. ಅವರಿಗೆ ಬಲಿದಾನಗಳ ಮಹತ್ವ ಸಹ ತಿಳಿದಿರುತ್ತದೆ. ಆದುದರಿಂದ ಅವರು ಕೆಲವೊಮ್ಮೆ ತಮ್ಮ ಲೌಕಿಕ ಜೀವಿತವನ್ನು ಆಧ್ಯಾತ್ಮಿಕ ಜೀವಿತಕ್ಕೋಸ್ಕರ ಬಲಿಯರ್ಪಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಸಹ ಅಂತಹ ಜನರಿದ್ದರು. ಅವರು ತಮ್ಮ ಕುಟುಂಬವನ್ನು, ಸಂಬಂಧಿಕರನ್ನು, ಸಂಪತ್ತನ್ನು, ವ್ಯಾಪಾರವನ್ನು, ಮಾತ್ರವಲ್ಲ ತಮ್ಮ ಜೀವನವನ್ನೂ ಬಲಿದಾನವಾಗಿ ಅರ್ಪಿಸಿದರು. ಸತ್ಯ ವಿಶ್ವಾಸಿಗಳು ತಮ್ಮ ಭಾವನೆಗಳನ್ನು, ಕುಟುಂಬ ಸಂಬಂಧವನ್ನು ಮತ್ತು ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಬಲಿಯರ್ಪಿಸಬೇಕಾಗುತ್ತದೆ. ಆದರೆ ಜೀವ ಸಹ ಬಲಿದಾನವಾಗಿ ನೀಡುವವರು ಸಹ ಅವರ ಪೈಕಿ ಇರುತ್ತಾರೆ. ಅವರು ತಮ್ಮ ಸರ್ವಸ್ವವನ್ನೂ ಬಲಿಯರ್ಪಿಸಿದರು. ಆದರೆ ತಮ್ಮ ಆಧ್ಯಾತ್ಮಿಕ ಜೀವಿತಕ್ಕೆ ಮೃತ್ಯು ಬಂದೆರಗದಂತೆ ಅವರು ಜಾಗ್ರತೆ ವಹಿಸಿದರು. ಈಗ ಸಹ ನೂರಾರು ಸಾವಿರಾರು ಜನರು ಆ ರೀತಿ ಬಲಿದಾನ ನೀಡುತ್ತಾ ಇದ್ದಾರೆ. ಭಾವನೆಗಳ ಬಲಿದಾನ, ಸಂಪತ್ತಿನ ಬಲಿದಾನ, ಸಂಬಂಧಿಕರ ಸಂಬಂಧ ತ್ಯಜಿಸುವ ಬಲಿದಾನ ಈ ಎಲ್ಲಾ ಬಲಿದಾನಗಳನ್ನು ಅವರು ಸ್ವಂತ ಇಷ್ಟದಿಂದ ನೀಡುತ್ತಿದ್ದಾರೆ. ಕೆಲವು ಸ್ಥಳಗಳಲ್ಲಿ ತಮ್ಮ ಜೀವಗಳನ್ನೂ ಅವರು ಬಲಿದಾನವಾಗಿ ನೀಡುತ್ತಿದ್ದಾರೆ.

ಇಸ್ಲಾಮ್ ಧರ್ಮದ ವಾಸ್ತವಿಕ ರೂಪವಾದ ಅಹ್ಮದಿಯ್ಯತ್ತನ್ನು ಸ್ವೀಕರಿಸುವ ಅನೇಕ ಜನರು ಅದರೊಂದಿಗೆ ಕಷ್ಟಗಳ ಕಾಲವನ್ನು ಅನುಭವಿಸಲು ಪ್ರಾರಂಭಿಸುತ್ತಾರೆ. ಆದರೆ ಅವರು ಅದನ್ನು ಪರಿಗಣಿಸದೆ ಆಧ್ಯಾತ್ಮಿಕ ಜೀವಿತಕ್ಕೆ ಲೌಕಿಕ ಜೀವಿತದ ಮೇಲೆ ಆದ್ಯತೆ ನೀಡುತ್ತಾರೆ.

ಉಸಾಮುದ್ದೀನ್ ಎಂಬ ಒಬ್ಬ ಅರಬಿ ಹೀಗೆ ಬರೆಯುತ್ತಾರೆ: "ನಾನು ಬೈಅತ್ ಮಾಡಿದ ನಂತರ ಬಹಳ ಕಷ್ಟಗಳು ಪ್ರಾರಂಭವಾಗಿವೆ. ನನ್ನ ಪತ್ನಿ ಅಲ್ ಅಝ್‌ಹರ್ ವಿಶ್ವವಿದ್ಯಾಲಯದಿಂದ ನನ್ನ ಕುಫ್ರ್ ಬಗ್ಗೆ ಫತ್ವ ತರಿಸಿ ನನ್ನಿಂದ ಬೇರೆಯಾಗಿದ್ದಾಳೆ. ನನ್ನ ಮನೆಯವರು ನನ್ನ ಮೇಲೆ ಬಹಳ ಒತ್ತಡ ಹೇರಿ ಜಮಾಅತನ್ನು ಬಿಡಲು ಹೇಳುತ್ತಿದ್ದಾರೆ. ನನ್ನ ನಾಲ್ಕು ಮಕ್ಕಳನ್ನು ನನ್ನಿಂದ ದೂರಮಾಡಲಾಗಿದೆ. ಎಲ್ಲವನ್ನೂ ತ್ಯಜಿಸಿದರೂ ಅಲ್ಲಾಹನ ಅನುಗ್ರಹದಿಂದ ನಾನು ಸತ್ಯವಿಶ್ವಾಸಿಯಾಗಿ ಮುಂದುವರಿದಿದ್ದೇನೆ. ಬೈಅತ್ ಮಾಡಿದ ನಂತರ ಮೊತ್ತಮೊದಲಾಗಿ ನನಗೆ ತಬ್ಬಲಿತನ ಏನೆಂದು ಮನವರಿಕೆ ಆಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾತಿನ ಇಂಗಿತ ಸಹ ಅರಿವಾಯಿತು. ಅವರು ಹೇಳಿದ್ದರು– ಇಸ್ಲಾಮ್ ಅಪರಿಚತೆಯೊಂದಿಗೆ ಪ್ರಾರಂಭಗೊಂಡಿತು. ಕೊನೆಗೆ ಅದು ಅಪರಿಚತೆಯನ್ನು ಹೊಂದುವುದು. ಅಪರಿಚತರಾದವರಿಗೆ ಶುಭವಾಗಲಿ."

ತೆನ್‌ಝಾನಿಯ ದೇಶದ ನಮ್ಮ ಅಮೀರ್ ಸಾಹೇಬರು ಬರೆಯುತ್ತಾರೆ: ಒಂದು ತಬ್ಲೀಗ್ ಕಾರ್ಯಕ್ರಮದ ನಂತರ ಅನೇಕ ಸ್ಥಳಗಳಿಂದ ಬೈಅತ್‌ಗಳು ಲಭಿಸಿತು. ಒಂದು ಗ್ರಾಮದ ಮುಸ್ಲಿಮರಲ್ಲಿ ಶೇಕಡ ತೊಂಬತ್ತರಷ್ಟು ಜನರು ಬೈಅತ್ ಮಾಡಿದರು. ಆಗ ಅಹ್ಮದಿಯೇತರ ಮುಸ್ಲಿಮರ ಸಂಘಟನೆ ಪ್ರತಿಭಟನೆ ಪ್ರಾರಂಭಿಸಿತು. ಅವರು ಅಹ್ಮದಿಯರ ವಿರುದ್ಧ ಹಲವು ದೋಷಾರೋಪಗಳನ್ನು ಮಾಡಿದರು. ಅಹ್ಮದಿಯರು ಮಸ್‌ಜಿದ್ ಸುಟ್ಟು ಹಾಕಲು ಬಂದಿದ್ದಾರೆ ಎಂದೆಲ್ಲಾ ಸುಳ್ಳು ಆರೋಪ ಮಾಡಿದರು. ಅಹ್ಮದಿಯರು ಶಾಂತಿ ಕೆಡಿಸುತ್ತಾರೆಂದು ದೂರು ನೀಡಿದರು. ಆದರೆ, ಬೈಅತ್ ಮಾಡಿದ ಅಹ್ಮದಿಯರು ಕಷ್ಟಗಳನ್ನು ಅನುಭವಿಸುತ್ತಿದ್ದರೂ ತಮ್ಮ ವಿಶ್ವಾಸದಲ್ಲಿ ದೃಢ ಚಿತ್ತರಾಗಿದ್ದಾರೆ.

ಇನ್ನೊಂದು ಉದಾಹರಣೆ ವೆಸ್ಟ್ ಆಫ್ರಿಕದ ದೇಶವಾದ ಬುರ್ಕಿನಾ ಫಾಸೋಗೆ ಸಂಬಂಧಿಸಿದೆ. ಅಲ್ಲಿ ಒಂದು ಗ್ರಾಮದಲ್ಲಿ ಹಿಂದಿನ ವರ್ಷ ಐನೂರು ಜನರು ಬೈಅತ್ ಮಾಡಿದರು. ಅವರಲ್ಲಿ ಅಲ್ಲಿನ ಚೀಫ್ ಮತ್ತು ಇಮಾಮ್ ಸೇರಿದ್ದರು. ಈ ಗ್ರಾಮದ ಜನರ ಸಂಬಂಧಿಕರು ವಾಸಿಸುತ್ತಿದ್ದ ಸಮೀಪದ ಗ್ರಾಮದವರು ಅವರೊಂದಿಗೆ ಸಂಬಂಧ ವಿಚ್ಛೇಧಿಸಿದರು. ಅವರು ಬಹಳ ಕಷ್ಟಗಳನ್ನು ಅನುಭವಿಸಿದರು. ಆದರೆ ಅವರು ಅಹ್ಮದಿಯ್ಯತ್ತಿನೊಂದಿಗೆ ಸಂಬಂಧವನ್ನು ವಿಚ್ಛೇಧಿಸಲಿಲ್ಲ.

ಕೆಲವು ಸಾರಿ ಬಲಿದಾನ ಅರ್ಪಿಸಲು ಸಿದ್ಧರಾಗುವ ಜನರಿಗೆ ಅವರು ಬಲಿದಾನವನ್ನು ಅರ್ಪಿಸುವ ಮೊದಲು ಅಲ್ಲಾಹನು ಹೇಗೆ ಅನುಗ್ರಹಿಸುತ್ತಾನೆಂದರೆ ನಾವು ಆಶ್ಚರ್ಯ ಚಕಿತರಾಗುತ್ತೇವೆ. ಇದಕ್ಕೆ ಒಂದು ಲೌಕಿಕ ಉದಾಹರಣೆಯ ಒಂದು ಕಥೆ ಹೀಗಿದೆ:

ಒಬ್ಬ ದೊರೆ ತನ್ನ ಮಂತ್ರಿಯ ಜೊತೆಗೆ ಹೋಗುತ್ತಿದ್ದಾಗ ಒಬ್ಬ ವೃದ್ಧ ರೈತ ಒಂದು ಹಣ್ಣಿನ ಗಿಡ ನೆಡುವುದನ್ನು ಕಂಡನು. ಆ ವೃದ್ಧನ ವಯಸ್ಸು ನೋಡುವಾಗ ಅವನು ಆ ಹಣ್ಣಿನ ಮರದ ಫಲವನ್ನು ತಿನ್ನುವಷ್ಟು ಕಾಲ ಜೀವಿಸುವ ಹಾಗೆ ತೋರುತ್ತಿರಲಿಲ್ಲ. ಆಗ ದೊರೆ ಆ ರೈತನೊಂದಿಗೆ ಕೇಳಿದನು: ನಿನಗೆ ಈ ಗಿಡ ನೆಡುವುದರ ಪ್ರಯೋಜನವೇನು ಸಿಗುವುದು? ಆಗ ಆ ರೈತ ಹೇಳಿದ: ನನ್ನ ಹಿರಿಯರು ನೆಟ್ಟ ಗಿಡದ ಫಲ ನಾನು ತಿನ್ನುತ್ತೇನೆ. ನಾನು ನೆಟ್ಟ ಗಿಡದ ಫಲವನ್ನು ನನ್ನ ನಂತರದವರು ತಿನ್ನುವರು. ದೊರೆಗೆ ಆ ರೈತನ ಮಾತು ಇಷ್ಟವಾಯಿತು. ಆಗ ಅವನಿಗೆ ಚಿನ್ನದ ನಾಣ್ಯದ ಚೀಲವನ್ನು ಕೊಟ್ಟನು. ಆಗ ರೈತ ಹೇಳಿದ: "ನೋಡಿರಿ, ನಾನು ಗಿಡ ನೆಟ್ಟ ಕೂಡಲೆ ನನಗೆ ಫಲ ಲಭಿಸಿತು." ಈ ಮಾತು ಸಹ ದೊರೆಗೆ ಇಷ್ಟವಾಯಿತು ರೈತನಿಗೆ ಇನ್ನೊಂದು ನಾಣ್ಯದ ಚೀಲವನ್ನು ದೊರೆ ಕೊಟ್ಟನು. ಆಗ ರೈತ ಹೇಳಿದನು: ಗಿಡ ಅನೇಕ ವರ್ಷಗಳ ನಂತರ ವರ್ಷದಲ್ಲಿ ಒಮ್ಮೆ ಫಲ ನೀಡುತ್ತದೆ. ನನಗೆ ಗಿಡ ನೆಟ್ಟ ಕೂಡಲೆ ಎರಡು ಸಾರಿ ಫಲ ದೊರಕಿತು. ಆ ಮಾತು ಸಹ ದೊರೆಗೆ ಇಷ್ಟವಾಯಿತು. ಮತ್ತೊಂದು ನಾಣ್ಯದ ಚೀಲವನ್ನು ರೈತನಿಗೆ ನೀಡಿದನು. ನಂತರ ದೊರೆ ಮಂತ್ರಿಯೊಡನೆ ಹೇಳಿದನು ನಾವು ಈ ರೈತನ ಮಾತು ಕೇಳುತ್ತಾ ನಿಂತರೆ ಅವನು ನಮ್ಮ ಎಲ್ಲಾ ಹಣವನ್ನು ಲೂಟಿ ಮಾಡುವನು. ನಾವು ಹೋಗುವ.

ಲೋಕದ ದೊರೆಗಳಿಗೆ ತಮ್ಮ ಖಜಾನೆ ಖಾಲಿಯಾಗುವ ಭಯವಿರುತ್ತದೆ. ಆದರೆ ನಮ್ಮ ದೇವನು ನೀಡುವ ಪಾರಿತೋಷಕಗಳು ಎಂದೂ ಮುಗಿಯಲಾರವು. ಅವನು ಆಧ್ಯಾತ್ಮಿಕ ಜೀವಿತವನ್ನು ನೀಡಿದ ನಂತರ ಶಾಶ್ವತ ಜೀವಿತವನ್ನು ನೀಡುತ್ತಾನೆ. ಪರಲೋಕ ಜೀವಿತದಲ್ಲಿ ಸಹ ಅವನು ಪಾರಿತೋಷಕಗಳನ್ನು ನೀಡುತ್ತಾ ಇರುವನು. ಆದಿಕಾಲೀನ ಕ್ರೈಸ್ತ ಜನರು ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ಪರ್ವತಗಳ ಗವಿಗಳಲ್ಲಿ ಅಡಗಿ ಕುಳಿತರು. ತಮ್ಮ ಆಧ್ಯಾತ್ಮಿಕ ಜೀವಿತವನ್ನು ರಕ್ಷಿಸಲು ಅವರು ಊರನ್ನು ಬಿಟ್ಟು ಪರ್ವತಗಳಿಗೆ ಪಲಾಯನ ಮಾಡಿದರು. ಏಕೆಂದರೆ ಅವರಿಗೆ ದೃಢ ವಿಶ್ವಾಸವಿತ್ತು– ಮುಂದೆ ಒಂದು ದಿನ ತಮಗೆ ಸ್ವಾತಂತ್ರ್ಯ ಸಿಗುವುದೆಂದು. ಮುಹಮ್ಮದೀ ಮಸೀಹರ ಗುಲಾಮರಾದ ನಮಗೆ ಅವರಿಗಿಂತ ಹೆಚ್ಚಿನ ಮಟ್ಟದ ದೃಢ ವಿಶ್ವಾಸವಿದೆ. **ಇನ್‌ಶಾಅಲ್ಲಾಹ್** ನಮಗೆ ಜಯ ಸಿಗುವುದು. ನಾವು ಕಷ್ಟದ ಕಾಲದಲ್ಲಿ ನಮ್ಮ ವಿಶ್ವಾಸವನ್ನು ಸಂರಕ್ಷಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಕುಡಿಸಿದ ಜೀವದಾಯಕ ಪಾನೀಯದಿಂದ ನಾವು ಅನುಗ್ರಹ ಗಳಿಸುತ್ತಾ ಇರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಿಜಯದ ಬಗ್ಗೆ ಅನೇಕ ಸ್ಥಳಗಳಲ್ಲಿ ಪ್ರಸ್ತಾಪಿಸಿದ್ದಾರೆ. ಒಂದು ಕಡೆ ಅವರು ಹೇಳುತ್ತಾರೆ:

"ಸಮಸ್ತ ಜನರೇ ನೀವು ಆಲಿಸಿಕೊಳ್ಳಿರಿ. ಇದು ಭೂಮ್ಯಾಕಾಶಗಳನ್ನು ನಿರ್ಮಿಸಿದವನು ಹೇಳಿದ ಭವಿಷ್ಯವಾಣಿಯಾಗಿದೆ– ಎಲ್ಲಾ ದೇಶಗಳಲ್ಲೂ ಅಲ್ಲಾಹನು ಈ ಜಮಾಅತನ್ನು ಹರಡುವನು. (ಅಲ್ಲಾಹನ ಅನುಗ್ರಹದಿಂದ ಇದು ಹರಡುತ್ತಾ ಇದೆ). ಸಾಕ್ಷ್ಯಾಧಾರಗಳ ಮೂಲಕ ಎಲ್ಲರ ಮೇಲೆ ಈ ಜಮಾಅತಿನ ಜನರಿಗೆ ಜಯ ನೀಡುವನು. ಆ ದಿನ ಬರಲಿದೆ. ಅದು ಅತೀ ಸಮೀಪವಿದೆ. ಲೋಕದಲ್ಲಿ ಈ

ಒಂದು ಧರ್ಮ ಮಾತ್ರ ಗೌರವಿಸಲ್ಪಡುವುದು. ಅಲ್ಲಾಹನು ಈ ಜಮಾಅತಿಗೆ ಅಸಾಧಾರಣವಾದ ಅನುಗ್ರಹಗಳನ್ನು ದಯಪಾಲಿಸುವನು. ಇದನ್ನು ನಾಶಮಾಡಲು ಯೋಚಿಸುವ ಪ್ರತಿಯೊಬ್ಬನನ್ನು ನಿರಾಶೆಗೊಳ್ಳುವಂತೆ ಮಾಡುವನು. ಈ ಜಮಾಅತಿಗೆ ಲಭಿಸುವ ವಿಜಯ ಪುನರುತ್ಥಾನದ ದಿನದ ತನಕ ಮುಂದುವರಿಯುವುದು. ನನ್ನನ್ನು ಪರಿಹಾಸ ಮಾಡುತ್ತಿರುವರಾದರೆ ಅದರಿಂದ ನನಗಾಗುವ ನಷ್ಟವಾದರೂ ಏನು. ಏಕೆಂದರೆ ಯಾವುದೇ ಪ್ರವಾದಿ ಪರಿಹಾಸಗೊಳಿಸಲ್ಪಡದೆ ಇರಲಿಲ್ಲ, ಆದುದರಿಂದ ಮಸೀಹ್ ಮೌಊದ್ ಸಹ ಪರಿಹಾಸಕ್ಕೆ ಪಾತ್ರನಾಗುವುದು ಆವಶ್ಯಕವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

**ಯಾ ಹಸ್‌ರತನ್ ಅಲಲ್ ಇಬಾದಿ. ಮಾ ಯಅ್‌ತೀಹಿಮ್ ಮಿನ್‌ರ್ರಸೂಲಿನ್. ಇಲ್ಲಾ ಕಾನೂ ಬಿಹೀ ಯಸ್‌ತಹ್‌ಝಿಊನ್**

ಹಾ! ಮನುಷ್ಯರ ದುರದೃಷ್ಟವೇ, ಅವರ ಅಪಹಾಸ್ಯಕ್ಕೆ ಗುರಿಯಾಗದ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ. (ಪವಿತ್ರ ಖುರ್‌ಆನ್, 36: 31).

ಪ್ರತಿಯೊಬ್ಬ ಪ್ರವಾದಿಯನ್ನು ಜನರು ಪರಿಹಾಸಮಾಡುತ್ತಾರೆ ಎಂಬುದು ಪ್ರವಾದಿಗಳಿಗೆ ಅಲ್ಲಾಹನು ಹೇಳಿದ ಚಿಹ್ನೆಯಾಗಿದೆ. ಜನರ ಎದುರಿಗೆ ಒಬ್ಬರು ಆಕಾಶದಿಂದ ಇಳಿದು ಬರುವುದಾದರೆ ಮತ್ತು ದೇವ ದೂತರು ಸಹ ಆತನ ಜೊತೆಗಿದ್ದರೆ ಅಂತಹ ವ್ಯಕ್ತಿಯನ್ನು ಯಾರು ಪರಿಹಾಸ ಮಾಡುವರು?. ಈ ಸಾಕ್ಷ್ಯಾಧಾರದಿಂದಲೂ ಬುದ್ಧಿವಂತರಾದ ಜನರು ಮನವರಿಕೆ ಮಾಡಿಕೊಳ್ಳಬಹುದು ವಾಗ್ದತ್ತ ಮಸೀಹ್ ಅಕಾಶದಿಂದ ಇಳಿದು ಬರುವರೆಂದು ಹೇಳುವುದು ಸುಳ್ಳು ಯೋಚನೆಯೇ ಆಗಿದೆ ಎಂದು. ನೀವು ನೆನಪಿಡಿರಿ. ಆಕಾಶದಿಂದ ಯಾರೂ ಇಳಿದು ಬರಲಾರರು. ಈಗ ಜೀವಿಸಿರುವ ನಮ್ಮ ವಿರೋಧಿಗಳಾದ ಎಲ್ಲರೂ ಮೃತರಾಗುವರು. ಆದರೆ ಅವರ ಪೈಕಿ ಯಾರೂ 'ಈಸಬ್ನು ಮರ್‌ಯಮ್' ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅವರ ಬಾಕಿಯಾಗಿ ಉಳಿದ ಸಂತಾನಗಳು ಸಹ ಮೃತರಾಗುವರು. ಆದರೆ ಅವರ ಪೈಕಿ ಸಹ ಯಾರೂ 'ಈಸಬ್ನು ಮರ್‌ಯಮ್' ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅನಂತರ ಅವರ ಮಕ್ಕಳ ಮಕ್ಕಳು ಕೂಡ ಮೃತರಾಗುವರು. ಆದರೆ ಅವರು ಸಹ ಮರ್ಯಮ್ ಪುತ್ರ ಈಸಾ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಆಗ ಅಲ್ಲಾಹನು ಜನರ ಹೃದಯಗಳಲ್ಲಿ ಗಾಬರಿ ಉಂಟು ಮಾಡುವನು. ಶಿಲುಬೆಯ ವಿಜಯದ ಕಾಲ ಕೊನೆಗೊಂಡಿದೆ. ಲೋಕವು ಬೇರೆ ಬಣ್ಣವನ್ನು ಹೊಂದಿದೆ. ಆದರೂ ಮರ್‌ಯಮ್ ಪುತ್ರ ಈಸಾ ಆಕಾಶದಿಂದ ಇಳಿದು ಬರಲಿಲ್ಲ ಎಂದು. ಆಗ ಬುದ್ಧಿಶಾಲಿಗಳು ಈ ವಿಶ್ವಾಸದ ಬಗ್ಗೆ ಬೇಸರ ಹೊಂದುವರು. ಇಂದಿನ ದಿನದಿಂದ ಮೂರು ಶತಮಾನಗಳು ಪೂರ್ಣವಾಗುವುದರೊಳಗೆ ಈಸಾರನ್ನು ಪ್ರತೀಕ್ಷಿಸುತ್ತಿರುವ ಮುಸ್ಲಿಮರೂ ಕ್ರೈಸ್ತರೂ ಸಂಪೂರ್ಣವಾಗಿ ನಿರಾಶೆ ಹೊಂದುವರು ಮತ್ತು ಈ ಸುಳ್ಳು ವಿಶ್ವಾಸವನ್ನು ತ್ಯಜಿಸುವರು. ಆಗ ಲೋಕದಲ್ಲಿ ಒಂದೇ ಧರ್ಮ ಇರುವುದು. ಒಬ್ಬನೇ ನೇತಾರ. ನಾನೊಂದು ಬೀಜವನ್ನು ಬಿತ್ತಲು ಆಗಮಿಸಿರುವೆನು. ನನ್ನ ಕೈಯಿಂದ ಅದನ್ನು ಬಿತ್ತಲಾಗಿದೆ. ಅದು ಮೊಳಕೆಯೊಡೆದು ಬೆಳೆಯುವುದು. ಅದರ ಬೆಳವಣಿಗೆಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ–**ಇನ್‌ಶಾಅಲ್ಲಾಹ್.**"

ಅಲ್ಲಾಹನು ಈ ರೀತಿ ಹೊಸ ಮಾರ್ಗಗಳನ್ನು ತೆರೆದು ಕೊಡುತ್ತಿದ್ದಾನೆ. ಈ ವಿಷಯದ ಬಗ್ಗೆ ಯೋಚಿಸಬೇಕೆಂದು ಅಲ್ಲಾಹನೇ ಸ್ವತಃ ಜನರ ಹೃದಯಗಳನ್ನು ಪ್ರೇರೇಪಿಸುತ್ತಿದ್ದಾನೆ. ಬೆಳೆಯುತ್ತಿರುವ ಹಾಗೂ ಫಲ ನೀಡುವ ಈ ವೃಕ್ಷದ ಭಾಗವಾಗಲು ಅಲ್ಲಾಹನು ನಮಗೆ ಅನುಗ್ರಹ ದಯಪಾಲಿಸಲಿ. ನಮ್ಮ ವಿಶ್ವಾಸವನ್ನು ಬಲಿಷ್ಠವಾದ ಬಂಡೆಗಲ್ಲಿನ ಹಾಗೆ ಸ್ಥಿರವಾಗಿರುವಂತೆ ಅವನು ಮಾಡಲಿ. ನಾವು ನಮ್ಮ ಹೊಣೆಗಾರಿಕೆಗಳನ್ನು ಯಾವಾಗಲೂ ಈಡೇರಿಸುವಂತಾಗಲು ಅವನು ನಮ್ಮನ್ನು ಅನುಗ್ರಹಿಸಲಿ– ಆಮೀನ್.

**——————————*****——————————**

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 15-08-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

***Email***: **khutuba.kannada@gmail.com**